SC No. 21/2019
PW.-22

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 21/2019

| | | |
|---|---|---|
| ಸಾಕ್ಷಿದಾರರ ಹೆಸರು | ಮಂಜುಳ ಆರ್.ಟಿ. | ಪ್ರಮಾಣ ವಚನ ಮಾಡಿದ ದಿನಾಂಕ: 20.08.2025 |
| ತಂದೆಯ/ಗಂಡನ ಹೆಸರು | ಬಿ. ಪ್ರಕಾಶ್ | |
| ವಯಸ್ಸು | 50 ವರ್ಷ | |
| ವೃತ್ತಿ | ಎ.ಎಸ್.ಐ , ಲಕ್ಷ್ಮೀಪುರಂ ಪೊಲೀಸ್ ಠಾಣೆ | ಪ್ರಾ.ಸಾಃ 22 |
| ವಾಸ ಸ್ಥಳ | ಮೈಸೂರ | ಚಾ.ಸಾಃ 29 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಮಂಡಿ ಪೊಲೀಸ್ ಠಾಣೆಯಲ್ಲಿ *2014* ರಿಂದ *2022* ರವರೆಗೆ ಮಹಿಳಾ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನು. ದಿನಾಂಕ *25.06.2015* ರಂದು ಠಾಣೆಯ ಇನ್ಸ್ ಪೆಕ್ಟರ್ ಅವರು ನನ್ನನ್ನು ಮತ್ತು ಮಹಿಳಾ ಪಿಸಿ *248* ರೂಪ ಮತ್ತು ಪಿಸಿ *149, 266, 690* ರವರುಗಳನ್ನು ಕರೆದು ಠಾಣಾ ಮೊ.ಸಂಖ್ಯೆಯ *95/2015* ಪ್ರಕರಣದಲ್ಲಿನ ಆರೋಪಿತಳು ಮನೆಯ ಹತ್ತಿರ ಇರುತ್ತಾನೆ ಎಂದು ವರ್ತಮಾನ ಬಂದ ಮೇರೆಗೆ ನಾವುಗಳು ಮತ್ತು ಠಾಣಾ ಇನ್ಸ್ ಪೆಕ್ಟರ್ ಅವರು ಕೂಡಿ ಸರ್ಕಾರಿ ವಾಹನದಲ್ಲಿ ಆರೋಪಿತಳ ಮನೆಯ ಹತ್ತಿರ ಹೋಗಿ ನೋಡಲಾಗಿ ಆರೋಪಿತಳು ಮನೆಯ ಮುಂದೆ ನಿಂತಿದ್ದು ನಮ್ಮನ್ನು ನೋಡಿ ಮುಂದಕ್ಕೆ ಹೋಗುತ್ತಿದ್ದರು ಆಗ ಇನ್ಸ್ ಪೆಕ್ಟರ್ ಅವರು ನಮಗೆ ಹಿಡಿದುಕೊಳ್ಳುವಂತೆ ತಿಳಿಸಿದ್ದರು ನಾವುಗಳು ಆರೋಪಿತಳನ್ನು ಹಿಡಿದುಕೊಂಡಿದ್ದೆವು. ನಂತರ ಇನ್ಸ್ ಪೆಕ್ಟರ್ ಅವರು ಆರೋಪಿತಳನ್ನು ದಸ್ತಗಿರಿ ಮಾಡಿದ್ದೆವು. ಈ ವಿಚಾರವನ್ನು ಆಕೆಯ ಅಕ್ಕನ ಮಗ ಅಮಿತ್ ಕುಮಾರ್ ಅವರಿಗೆ ತಿಳಿಸಿತ್ತು.

ಆರೋಪಿತಳನ್ನು ಸ್ಥಳದಲ್ಲಿ ವಿಚಾರಣೆ ಮಾಡಿದ್ದರು ಆಗ ಆರೋಪಿತರು ತಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಪ್ರೇಮ ಕುಮಾರಿ ಎನ್ನುವವರಿಗೆ ಹಣ ಕೊಟ್ಟಿದ್ದೆ ಅವರಿಗೆ ಹಣ ವಾಪಸ್ಸು ಕೊಡುವಂತೆ ಕೇಳಿದ್ದೆ ಅವರು ಯಾವುದೋ ಕ್ರಿಮಿನಿಶಾಕವನ್ನು ಸೇವನೆ ಮಾಡಿರುತ್ತಾರೆ ಎಂದು ತಿಳಿಸಿದ್ದರು. ಬೇರೆಯವರೊಂದಿಗೂ ನಾನು ಹಣ ವ್ಯವಹಾರ ಮಾಡಿದ್ದೇನೆ ಕರೆದುಕೊಂಡು ಹೋದರೆ ತೋರಿಸುತ್ತೇನೆ ಮತ್ತು ಆ ಬಗ್ಗೆ ದಾಖಲೆ ಇರುತ್ತವೆ ಎಂದು ಹೇಳಿದ್ದರು. ಆಗ ಇನ್ಸ್ ಪೆಕ್ಟರ್ ಅವರು ಅದೇ ರಸ್ತೆಯಲ್ಲಿ ಬರುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಆರೋಪಿತಳ ಮನೆಯನ್ನು ಶೋಧನೆ ಮಾಡಬೇಕಾಗಿರುತ್ತದೆ ಸಾಕ್ಷಿದಾರರಾಗಿ ಇರುವಂತೆ ಹೇಳಿ ಕೇಸಿನ ವಿದ್ಯಾಮಾನಗಳನ್ನು ತಿಳಿಸಿದ್ದರು. ಅದಕ್ಕೆ ಅವರು ಒಪ್ಪಿಕೊಂಡಿದ್ದರು ಸ್ಥಳದಲ್ಲಿ ಇನ್ಸ್ ಪೆಕ್ಟರ್ ಅವರು ನೊಟೀಸ್ ಅನ್ನು ಜಾರಿ ಮಾಡಿದ್ದರು. ಆರೋಪಿತಳು ಮನೆಯ ಒಳಗೆ ಇದ್ದ ಅಲ್ಮೇರಾದಿಂದ ಕೆಲವು ದಾಖಲೆಗಳನ್ನು ತೆಗೆದುಕೊಟ್ಟಿದ್ದರು ಅವುಗಳಲ್ಲಿ ಇನ್ಸ್ ಪೆಕ್ಟರ್ ಅವರು ಪ್ರಕರಣಕ್ಕೆ ಬೇಕಾದ ದಾಖಲೆಗಳನ್ನು ತೆಗೆದುಕೊಂಡಿದ್ದರು. ಮತ್ತು ಸ್ಥಳದಲ್ಲಿ ಮಹಜರ್ ಮಾಡಿ ದಾಖಲೆಗಳನ್ನು ತೆಗೆದುಕೊಂಡಿದ್ದರು. ಮಹಜರ್ ಗೆ ನಾನು ಸಹಿ ಮಾಡಿದ್ದೆ. ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ಅಮಾನತ್ತು ಪಂಚಾನಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-*34* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಗಳನ್ನು ನಿಪಿ-*34(ಸಿ), 34(ಡಿ) , 34(ಇ), 34(ಎಫ್)* ಮತ್ತು *34(ಜಿ)* ಎಂದು ಗುರುತಿಸಲಾಯಿತು. ಮಹಜರ್ ಅನ್ನು ಮಧ್ಯಾಹ್ನ *1.00* ಗಂಟೆಯಿಂದ ಸಂಜೆ *6.00* ಗಂಟೆಯವರೆಗೆ ಮಾಡಿತ್ತು. ನಾನು ಆ ದಿನ ಅಮಾನತ್ತು ಪಡಿಸಿಕೊಂಡಿದ್ದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸವಿತ ಎಂ. ಎಂಬುವವರ ಎಸ್.ಬಿ.ಐ ಬ್ಯಾಂಕ್ ವಿಜಯಗರ ಬ್ರಾಂಚ್ ನ *4* ಚೆಕ್ಕುಗಳು ಮತ್ತು ಆನ್ ಡಿಮ್ಯಾಂಡ್ ಪ್ರನೋಟ್ ಗಳು ಸವಿತ ಮಲ್ಲೇಶ್ ಮತ್ತು ವೇದಾವತಿ ಅವರ ಹೆಸರಿನಲ್ಲಿ ಇದ್ದಂಹ ಖಾಲಿ ಛಾಪಾ ಕಾಗದ, ರವಿ ಕುಮಾರ್ ಎಂಬುವವರ ಆನ್ ಡಿಮ್ಯಾಂಡ್ ಪ್ರನೋಟ್, ರವಿಕುಮಾರ್ ಮತ್ತು ವೇದಾವತಿ ಹೆಸರಿನಲ್ಲಿ ಇದ್ದಂಹ ಛಾಪಾ ಕಾಗದ ಇತ್ತು. ಸವಿತ ಮಲ್ಲೇಶ್ ಮತ್ತು ವೇದಾವತಿ ಹೆಸರಿಗೆ ಚಾಮರಾಜನಗರ ತಾಲ್ಲೂಕು, ಸಂತೆಮರಳ್ಳಿ ಗ್ರಾಮದ ಸರ್ವೆ ನಂಬರ್ *250/2* ರಲ್ಲಿ *2* ಎಕರೆ *38* ಗುಂಟೆ ಮತ್ತು ಸರ್ವೆ ನಂಬರ್

ಮತ್ತೊಂದು ಸರ್ವೆ ನಂಬರ್ ಗೆ ಸಂಬಂಧಪಟ್ಟಂತಹ ಕ್ರಯ ಪತ್ರದ ಮೂಲ ದಾಖಲೆ ಮತ್ತು ಸುಮಾರು ದಾಖಲೆಗಳನ್ನು ತೆಗೆದುಕೊಂಡಿದ್ದರು. ಒಟ್ಟು *22* ದಾಖಲೆಗಳನ್ನು ತೆಗೆದುಕೊಂಡಿತ್ತು. ನಾನು ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು *2* ಆನ್ ಡಿಮ್ಯಾಂಡ್ ಪ್ರನೋಟ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ***41(e)*** ಮತ್ತು ***41(f)*** ಎಂದು ಗುರುತಿಸಲಾಯಿತು.

***( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)***

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.